FEBRUARY 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಪ್ರಧಾನಮಂತ್ರಿ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆ: ರಾಯಚೂರು, ಯಾದಗಿರಿಯಲ್ಲಿ, 49 ಸೂಚ್ಯಂಕಗಳಡಿ, ಕಾರ್ಯಕ್ರಮ ಅನುಷ್ಠಾನ.**
- **ರಾಜ್ಯದ ಪ್ರಯೋಗಾಲಯ ಪರೀಕ್ಷೆಯಲ್ಲಿ ವಿಫಲವಾದ, ಹೊರ ರಾಜ್ಯಗಳ ಔಷಧಿ ಮಾರಾಟ ನಿಯಂತ್ರಿಸಲು, ಕೇಂದ್ರಕ್ಕೆ ಮನವಿ.**
- **ಉತ್ತರಕನ್ನಡ ಜಿಲ್ಲೆ ಹೊನ್ನಾವರದ, ಗುಣವಂತೆಯ ಯಕ್ಷಾಂಗಣದಲ್ಲಿ, ಇಂದಿನಿಂದ ಒಂಬತ್ತು ದಿನ, ಕಲಾ ಕುಂಭ.**
- **ಬಾಗಲಕೋಟೆ ಜಿಲ್ಲೆ, ಮುಧೋಳದ ರನ್ನ ಬೆಳಗಲಿಯಲ್ಲಿ, ಇಂದಿನಿಂದ ಮೂರು ದಿನ 'ರನ್ನ ವೈಭವ'.**

<><><>

**ಈಗ ವಾರ್ತೆಗಳ ವಿವರ**

<><><>

**ಪ್ರಧಾನಮಂತ್ರಿ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯಡಿ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಯಾದ್ಯಂತ, 49 ಸೂಚ್ಯಂಕಗಳಡಿ, ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಕಾಲಮಿತಿಯಲ್ಲಿ, ಗುಣಮಟ್ಟದೊಂದಿಗೆ ಪೂರ್ಣಗೊಳಿಸುವಂತೆ, ಕೇಂದ್ರ ಹಣಕಾಸು ಸಚಿವಾಲಯದ, ಜಂಟಿ ಕಾರ್ಯದರ್ಶಿ ಸಮೀರ್ ಶುಕ್ಲಾ ಜಿಲ್ಲಾಡಳಿತಗಳಿಗೆ ಸೂಚಿಸಿದ್ದಾರೆ. ರಾಯಚೂರು ಹಾಗೂ ಯಾದಗಿರಿ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಅವರು ಪ್ರಗತಿ ಪರಿಶೀಲನಾ ಸಭೆ ನಡೆಸಿದರು.**

<><><>

**ದೇಶದ ಹಿಂದುಳಿದ 112 ಜಿಲ್ಲೆಗಳಲ್ಲಿ, ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯನ್ನು, 2018 ರಲ್ಲಿ ಕೇಂದ್ರ ಜಾರಿಗೊಳಿಸಿದೆ. ಆರೋಗ್ಯ ಮತ್ತು ಪೌಷ್ಟಿಕತೆ, ಕೃಷಿ ಮತ್ತು ಜಲ ಸಂಪನ್ಮೂಲ, ಶಿಕ್ಷಣ, ಆರ್ಥಿಕತೆ ಹಾಗೂ ಕೌಶಲಾಭಿವೃದ್ಧಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ, 49 ಸೂಚ್ಯಂಕ ನಿಗದಿ ಪಡಿಸಲಾಗಿದೆ ಎಂದರು.**

<><><>

**ರಾಯಚೂರಿನಲ್ಲಿ, ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ, ಪೊಲೀಸ್ ಕಾಲೋನಿಯ ಅಂಗನವಾಡಿ ಕೇಂದ್ರ–12, ಯರಮರಸ್ ಸರ್ಕಾರಿ ಆದರ್ಶ ವಿದ್ಯಾಲಯದ ಗ್ರಂಥಾಲಯಕ್ಕೆ ಭೇಟಿ ನೀಡಿ, ಸಮೀರ ಶುಕ್ಲಾ ಪರಿಶೀಲಿಸಿದರು.**

<><><>

ಕಳೆದ ಜನವರಿ 1 ಮತ್ತು ಪ್ರಸ್ತುತ ಫೆಬ್ರವರಿ ತಿಂಗಳ 16ರ ನಡುವೆ, ರಾಜ್ಯದ ಪ್ರಯೋಗಾಲಯದಲ್ಲಿ ಕೈಗೊಳ್ಳಲಾದ ಪರೀಕ್ಷೆ ವೇಳೆ, ಇತರೆ ರಾಜ್ಯಗಳಿಂದ ಕರ್ನಾಟಕಕ್ಕೆ ಪೂರೈಕೆಯಾದ, 9 ಚುಚ್ಚುಮದ್ದಿನ ಔಷಧಿಗಳ ಗುಣಮಟ್ಟ, ಕಳಪೆಯಾಗಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ಎಕ್ಸ್ ಖಾತೆಯಲ್ಲಿ ಪ್ರಕಟಿಸಿದ್ದಾರೆ. ರಾಜ್ಯದ ಪ್ರಯೋಗಾಲಯದಲ್ಲಿ ಕೈಗೊಳ್ಳಲಾದ ಹಲವು ಪರೀಕ್ಷೆಗಳಲ್ಲಿ, ವಿಫಲವಾಗಿರುವ ಹೊರ ರಾಜ್ಯಗಳ ಕೆಲ ಔಷಧಿಗಳ ಮಾರಾಟವನ್ನು, ಸಂಪೂರ್ಣ ನಿಷೇಧಿಸಿ, ನಿಯಂತ್ರಿಸುವಂತೆ, ಕೇಂದ್ರ ಆರೋಗ್ಯ ಖಾತೆ ಸಚಿವ ಜೆ.ಪಿ. ನಡ್ಡಾ ಅವರಿಗೆ, ಪತ್ರ ಬರೆದಿರುವುದಾಗಿ ಅವರು ತಿಳಿಸಿದ್ದಾರೆ.

<><><>

ಪಶ್ಚಿಮ ಬಂಗಾಳದಲ್ಲಿ ತಯಾರಿಸಿದ ಕೆಲವು ಚುಚ್ಚುಮದ್ದುಗಳು, ಬಳ್ಳಾರಿಯಲ್ಲಿ ಬಾಣಂತಿಯರ ಸಾವಿಗೆ ಕಾರಣವಾದ ಹಿನ್ನೆಲೆ, ನಿಗದಿತ ಕೆಲ ಔಷಧಿಗಳ ಮಾರಾಟಕ್ಕೆ ನಿಯಂತ್ರಣ ಹೇರುವಂತೆ, ಸಚಿವ ದಿನೇಶ ಗುಂಡೂರಾವ್, ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾಗಿ, ಸುದ್ದಿ ಸಂಸ್ಥೆ ಸಹ ವರದಿ ಮಾಡಿದೆ.

<><><>

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ, ‘ಕೃಷಿ ಭಾಗ್ಯ ಯೋಜನೆ’ಯನ್ನು ಮರು ಜಾರಿ ಗೊಳಿಸಲಾಗಿದೆ. ಈ ಯೋಜನೆಯಡಿ, ಕೃಷಿ ಹೊಂಡ ಮತ್ತು ಇತರೇ ಘಟಕಗಳನ್ನು ಅಳವಡಿಸಿಕೊಳ್ಳಲು ಇಚ್ಛಿಸುವ, ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ರೈತರು, ರೈತ ಸಂಪರ್ಕ ಕೇಂದ್ರಕ್ಕೆ ಅಗತ್ಯ ದಾಖಲೆಗಳೊಂದಿಗೆ, ಒಂದು ವಾರದೊಳಗಾಗಿ ಅರ್ಜಿ ಸಲ್ಲಿಸಲು, ಕೃಷಿ ಇಲಾಖೆ ಪ್ರಕಟಣೆ ಕೋರಿದೆ.

<><><>

‘ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ’ಯ 19ನೇ ಕಂತನ್ನು ಇದೇ 24ರಂದು ಸೋಮವಾರ, ಪ್ರಧಾನಮಂತ್ರಿ ನರೇಂದ್ರ ಮೋದಿ ಬಿಡುಗಡೆ ಮಾಡಲಿದ್ದಾರೆ ಎಂದು, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಹೊಸ ದಿಲ್ಲಿಯಲ್ಲಿ ತಿಳಿಸಿದ್ದಾರೆ. ಬಿಹಾರದ ಬಾಗಲ್‌ಪುರದಲ್ಲಿ ಆಯೋಜಿತ ಕಾರ್ಯಕ್ರಮದಲ್ಲಿ, ಒಟ್ಟು 9 ಕೋಟಿ 80 ಲಕ್ಷ ರೈತರಿಗೆ, 22 ಸಾವಿರ ಕೋಟಿ ರೂಪಾಯಿಯನ್ನು, ನೇರ ನಗದು ವರ್ಗಾವಣೆ ಮಾಡಲಿದ್ದಾರೆ ಎಂದರು.

<><><>

ಮೈಸೂರಿನ ಚಾಮುಂಡಿ ಬೆಟ್ಟದ, ಕೆಳ ಭಾಗದ ಲೇ ಔಟ್ ಒಂದರಲ್ಲಿ, ಕಸ ಸುಡಲು ಹಾಕಿದ ಬೆಂಕಿ, ವ್ಯಾಪಕವಾಗಿ ಹಬ್ಬಿದ ಪರಿಣಾಮ, ಚಾಮುಂಡಿ ಬೆಟ್ಟಕ್ಕೆ ಹಬ್ಬಿ, ಕುರುಚಲು ಸಸ್ಯ, ಪೊದೆಗಳು ಸುಟ್ಟು ಕರಕಲಾಗಿವೆ. ಜಿಲ್ಲಾ ಅಗ್ನಿಶಾಮಕ ದಳದ ಅಧಿಕಾರಿ ಗುರುರಾಜ್ ಹಾಗೂ ತಂಡ, 6 ಅಗ್ನಿ ಶಾಮಕ ವಾಹನಗಳು ಸೇರಿದಂತೆ, ನೀರು ಪೂರೈಸುವ ನಾಲ್ಕು ಟ್ಯಾಂಕರ್‌ಗಳನ್ನು ಬಳಸಿಕೊಂಡು, ಮಧ್ಯಾಹ್ನದಿಂದ ರಾತ್ರಿ ವರೆಗೆ, ಹಬ್ಬುತ್ತಿರುವ ಬೆಂಕಿ ನಂದಿಸಲು, ತುಂಬ ಪ್ರಯಾಸಪಟ್ಟರು. ಗಾಳಿ ವೇಗವಾಗಿ ಬೀಸುತ್ತಿದ್ದು, ಒಣಗಿ ನಿಂತ ಸಸ್ಯ ಹಾಗೂ ಬಿರು ಬೇಸಿಗೆ, ಬೆಂಕಿಯನ್ನು ಹತೋಟಿಗೆ ತರಲು ಅಡ್ಡಿ ಪಡಿಸುತ್ತಿದೆ ಎಂದು, ಗುರುರಾಜ್ ಆಕಾಶವಾಣಿಗೆ ತಿಳಿಸಿದರು.

<><><>

ಕಾಡಂಚಿನ ಜನ ಸಮುದಾಯಗಳನ್ನು ಒಳಗೊಂಡ, ಕಾಡು ಸಂರಕ್ಷಣೆ ನೀತಿ, ಕಾಡ್ಗಿಚ್ಚು ತಡೆಯುವ ಒಂದೇ ದಾರಿ ಎನ್ನುತ್ತಾರೆ, ಖ್ಯಾತ ಸಮಾಜ ವಿಜ್ಞಾನಿ ಧಾರವಾಡದ ಡಾಕ್ಟರ್ ಪ್ರಕಾಶ ಭಟ್.

<><><>

ಡಾ. ಪ್ರಕಾಶ ಭಟ್ ಧ್ವನಿ 50 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

2024ನೇ ಸಾಲಿನ, ಕುವೆಂಪು ರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭ, ಇಂದು ಬೆಳಗ್ಗೆ 10 ಗಂಟೆಗೆ, ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಆಯೋಜಿತವಾಗಿದೆ. ಬೆಳಗ್ಗೆ 10 ರಿಂದ 11 ಗಂಟೆಯ ವರೆಗೆ, ಆನಂದ ಮಾದಲಗೆರೆ ತಂಡದಿಂದ ಕುವೆಂಪು ಗೀತಗಾಯನ, 11 ರಿಂದ 11.30ರ ವರೆಗೆ, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು, ಆಶಯ ನುಡಿಗಳನ್ನಾಡುವರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 11.30ಕ್ಕೆ, ಹಿಮಾನ್ಷಿ ಇಂದುಲಾಲ್ ಶೆಲತ್ ಅವರಿಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಲಿದ್ದಾರೆ. 5 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆಯನ್ನು, ಪ್ರಶಸ್ತಿ ಒಳಗೊಂಡಿದೆ. ಸಾಹಿತಿ ವನಮಾಲ ವಿಶ್ವನಾಥ್ ಅವರು, ಬಳಿಕ ಪ್ರಶಸ್ತಿ ಪುರಸ್ಕೃತರೊಂದಿಗೆ ಸಂವಾದ ನಡೆಸಲಿದ್ದಾರೆ. ಕುಪ್ಪಳಿ ರಾಷ್ಟಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ ಹಾಗೂ ಗಣ್ಯರು ಪಾಲ್ಗೊಳ್ಳಲಿದ್ದಾರೆ.

<><><>

ಉತ್ತರಕನ್ನಡ ಜಿಲ್ಲೆಯ, ಕೆರೆಮನೆ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯ, 90ನೇ ವರ್ಷದ ಸಂಭ್ರಮ ಹಾಗೂ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದ ಅಂಗವಾಗಿ, ಹೊನ್ನಾವರ ತಾಲೂಕಿನ ಗುಣವಂತೆಯ ಯಕ್ಷಾಂಗಣದಲ್ಲಿ, ಇಂದಿನಿಂದ ಮಾರ್ಚ್ 2ನೇ ತಾರೀಖಿನ ವರೆಗೆ, ಕಲಾ ಕುಂಭ ಆಯೋಜಿತವಾಗಿದೆ. ದೇಶದ ನಾನಾ ಭಾಗಗಳಿಂದ, ನೃತ್ಯ, ನಾಟ್ಯ, ಸಂಗೀತ, ಯಕ್ಷಗಾನ ಸೇರಿದಂತೆ, ಹಲವಾರು ಕಲಾ ಶೈಲಿಗಳ, ಮಹಾನ್ ಕಲಾವಿದರು, ಖ್ಯಾತ ಕಲಾ ಸಾಧಕರು, ಪಾಲ್ಗೊಳ್ಳಲಿದ್ದಾರೆ.

<><><>

ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕೆರೆಮನೆ ಶ್ರೀ ಇಡಗುಂಜಿ ಮೇಳದ ನಿರ್ದೇಶಕ, ಕೆರೆಮನೆ ಶಿವಾನಂದ ಹೆಗಡೆ.

<><><>

ಕೆರೆಮನೆ ಶಿವಾನಂದ ಹೆಗಡೆ ಧ್ವನಿ 50 ಸೆಕೆಂದುಗಳು

<><><>

ಬಾಗಲಕೋಟೆ ಜಿಲ್ಲೆ, ಮುಧೋಳದ ರನ್ನ ಬೆಳಗಲಿಯಲ್ಲಿ ಇಂದಿನಿಂದ ಮೂರು ದಿನಗಳ ಕಾಲ ಆಯೋಜಿತ, 'ರನ್ನ ವೈಭವ'ಕ್ಕೆ, ಸಂಜೆ ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ.ಪಾಟೀಲ ಚಾಲನೆ ನೀಡಲಿದ್ದಾರೆ.

<><><>

ಮುಧೋಳ ರನ್ನ ಪ್ರತಿ ್ಠಾನದ ವತಿಯಿಂದ ನೀಡಲಾಗುವ, ರನ್ನ ಹಳಗನ್ನಡ ಪ್ರಶಸ್ತಿಗೆ, ವಿಶ್ರಾಂತ ಪ್ರಾಧ್ಯಾಪಕ ಶಾಂತಿನಾಥ ದಿಬ್ಬದ ಹಾಗೂ ವಿಶ್ರಾಂತ ಶಿಕ್ಷಕ ಶಂಕರಯ್ಯ ಉಕ್ಕಲಿ ಆಯ್ಕೆಯಾಗಿದ್ದಾರೆ ಎಂದು ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಪ್ರಕಟಿಸಿದ್ದಾರೆ. ಮುಧೋಳದಲ್ಲಿ ಅವರು ಸುದ್ದಿಗೋಷ್ಠಿ ನಡೆಸಿದರು. ಅಂತಾರಾಜ್ಯ ಮಹಿಳಾ ಮತ್ತು ಪುರು ’ರ ಕಬಡ್ಡಿ ಪಂದ್ಯಾವಳಿ ನಡೆಯಲಿದ್ದು, ಮಹಾರಾ ್ಟ್ರ, ಪಂಜಾಬ್, ದಿಲ್ಲಿ, ತಮಿಳುನಾಡು ಹಾಗೂ ಕೇರಳದಿಂದ ತಂಡಗಳು ಪಾಲ್ಗೊಳ್ಳಲಿವೆ ಎಂದರು.

<><><>

ಇಂದು ಬೆಳಗ್ಗೆ 10 ಗಂಟೆಗೆ, ಮುಧೋಳದ ರನ್ನ ಬೆಳಗಲಿಯಲ್ಲಿ, 'ಜಾನಪದ ವಾಹಿನಿ' ಕಲಾ ತಂಡಗಳ ಮೆರವಣಿಗೆಗೆ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಚಾಲನೆ ನೀಡಲಿದ್ದಾರೆ.

<><><>

ಪ್ರಯಾಗರಾಜ್ ಕುಂಭಮೇಳಕ್ಕೆ ತೆರಳಿದ್ದ, ಬೀದರ ನಗರದ ಲಾಡಗೇರಿಯ ಐವರು, ಉತ್ತರಪ್ರದೇಶದ, ಮಿರ್ಜಾಪುರ ಜಿಲ್ಲೆಯ, ರೂಪಾಪುರ ಬಳಿ, ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ತೀವ್ರ ಸಂತಾಪ ವ್ಯಕ್ತ ಪಡಿಸಿದ್ದಾರೆ. ಮೃತ ನಾಲ್ವರು ಹೆಣ್ಣು ಮಕ್ಕಳು ಹಾಗೂ ಓರ್ವ ಪುರುಷನ ಕುಟುಂಬಕ್ಕೆ, ತಲಾ 5 ಲಕ್ಷ ರೂಪಾಯಿ ಪರಿಹಾರ ಪ್ರಕಟಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ 7 ಜನರಿಗೆ ಸೂಕ್ತ ಚಿಕಿತ್ಸೆ ಹಾಗೂ ಸಂಪೂರ್ಣ ವೆಚ್ಚವನ್ನು, ಸರ್ಕಾರದಿಂದ ಭರಿಸುವುದಾಗಿ, ತಿಳಿಸಿದ್ದಾರೆ.

<><><>

ಒಟ್ಟು 14 ಜನ ಕಳೆದ 18ನೇ ತಾರೀಖು ಬೀದರ್ ನಿಂದ ಪುಣ್ಯಸ್ನಾನಕ್ಕೆಂದು, ಪ್ರಯಾಗ್‌ರಾಜ್‌ಗೆ ಪ್ರಯಾಣ ಬೆಳೆಸಿದ್ದರು ಎಂದು, ಪೊಲೀಸರು ತಿಳಿಸಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ನಾಳೆ ಭಾನುವಾರ ಬೆಳಗ್ಗೆ 11 ಗಂಟೆಗೆ, ಆಕಾಶವಾಣಿಯ ಜನಪ್ರಿಯ, 'ಮನ್ ಕಿ ಬಾತ್' ಕಾರ್ಯಕ್ರಮದ ಮೂಲಕ, ತಮ್ಮ ಚಿಂತನೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮನ್ ಕಿ ಬಾತ್ ನ 119ನೇ ಸಂಚಿಕೆಯಾಗಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರಧಾನಮಂತ್ರಿ ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆ; ರಾಯಚೂರು, ಯಾದಗಿರಿಯಲ್ಲಿ, 49 ಸೂಚ್ಯಂಕಗಳಡಿ, ಕಾರ್ಯಕ್ರಮ ಅನುಷ್ಠಾನ.
- ರಾಜ್ಯದ ಪ್ರಯೋಗಾಲಯ ಪರೀಕ್ಷೆಯಲ್ಲಿ ವಿಫಲವಾದ, ಹೊರ ರಾಜ್ಯಗಳ ಔ ’ಧಿ ಮಾರಾಟ ನಿಯಂತ್ರಿಸಲು, ಕೇಂದ್ರಕ್ಕೆ ಮನವಿ.
- ಉತ್ತರಕನ್ನಡ ಜಿಲ್ಲೆ ಹೊನ್ನಾವರದ, ಗುಣವಂತೆಯ ಯಕ್ಷಾಂಗಣದಲ್ಲಿ, ಇಂದಿನಿಂದ ಒಂಬತ್ತು ದಿನ, ಕಲಾ ಕುಂಭ.
- ಬಾಗಲಕೋಟೆ ಜಿಲ್ಲೆ, ಮುಧೋಳದ ರನ್ನ ಬೆಳಗಲಿಯಲ್ಲಿ, ಇಂದಿನಿಂದ ಮೂರು ದಿನ 'ರನ್ನ ವೈಭವ'.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>